ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು-572 103

ದೂರವಾಣಿ : 0816-2254548, 2255650, 2255598 ಫ್ಯಾಕ್ಸ್ : 0816-2270719

ಸಂಖ್ಯೆ: ತು.ವಿ:ಸಾ.ವಿ.15:2019-20 | ೩೦೬೭ ದಿನಾಂಕ: 16.08.2019

## ಮರು ದರಪಟ್ಟಿ ಆಹ್ವಾನ

ವಿಷಯ: ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಅಗತ್ಯವಿರುವ ಟ್ರೋಫಿ ಹಾಗೂ ಮೆಡಲ್ಸ್‌ಗಳನ್ನು ಸರಬರಾಜು ಮಾಡುವ ಸಂಬಂಧಿಸಿದಂತೆ ದರಪಟ್ಟಿ ಆಹ್ವಾನಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13.08.2019 (ಕಂಡಿಕೆ–42)

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಅಗತ್ಯವಿರುವ **ಅನುಬಂಧ–01** ರಲ್ಲಿರುವ ಟ್ರೋಫಿ ಹಾಗೂ ಮೆಡಲ್ಸ್‌ಗಳನ್ನು ಸರಬರಾಜು ಮಾಡುವುದಕ್ಕಾಗಿ ಒಂದು ಲಕ್ಷ ಮಿತಿಯೊಳಗೆ ಅರ್ಹ ಸರಬರಾಜುದಾರರಿಂದ ದರಪಟ್ಟಿಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಆಹ್ವಾನಿಸಲಾಗಿದೆ.

**ಷರತ್ತುಗಳು:**

1. ಲಕೋಟೆಯ ಮೇಲೆ **"ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಅಗತ್ಯವಿರುವ ಟ್ರೋಫಿ ಹಾಗೂ ಮೆಡಲ್ಸ್‌ಗಳನ್ನು ಸರಬರಾಜು ಮಾಡುವ ಕುರಿತು"** ಎಂದು ನಮೂದಿಸತಕ್ಕದ್ದು.
2. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
3. ತಾವು ನಮೂದಿಸುವ ಟ್ರೋಫಿ ಹಾಗೂ ಮೆಡಲ್ಸ್‌ಗಳ ವೈಶಿಷ್ಟ್ಯತೆಗಳ ಮತ್ತು ಬ್ರ್ಯಾಂಡ್ ಹೆಸರುಗಳು ಲಭ್ಯವಿದ್ದಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಿ ಪೂರಾವೆಗಳನ್ನು ಲಗತ್ತಿಸಬೇಕು.
4. ತಾವು ನಮೂದಿಸುವ ದರಗಳು ಟ್ರೋಫಿ ಹಾಗೂ ಮೆಡಲ್ಸ್‌ಗಳ ಮೇಲೆ ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ ಕ್ರಿಡಾಕೂಟ 2019–20 ಎಂದು ಮುದ್ರಿಸುವ ದರಗಳು ಒಳಗೊಂಡಿರತಕ್ಕದ್ದು.
5. ಟ್ರೋಫಿ ಹಾಗೂ ಮೆಡಲ್ಸ್‌ಗಳ ಆಯ್ಕೆ ವಿಷಯದಲ್ಲಿ ವಿಶ್ವವಿದ್ಯಾನಿಲಯದ ತಿರ್ಮಾನವೇ ಅಂತಿಮವಾಗಿರುತ್ತದೆ.
6. ಸರಬರಾಜು ಸಂಸ್ಥೆಯವರು ಸಗಟು ಮಾರಾಟಗಾರರು/ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
7. ಸರಬರಾಜು ಆದೇಶ ನೀಡಿದ ಒಂದು ವಾರದೊಳಗೆ ಅನುಬಂಧ–01 ರಲ್ಲಿ ತಿಳಿಸಿದ ಟ್ರೋಫಿ ಹಾಗೂ ಮೆಡಲ್ಸ್‌ಗಳನ್ನು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಸರಬರಾಜು ಮಾಡಬೇಕು.
8. ದರಪಟ್ಟಿಯಲ್ಲಿ ನಮೂದಿಸುವ ದರಗಳು ತೆರಿಗೆ ಹಾಗೂ ಇತರೆ ಸೇವೆಯ ಮೊತ್ತವನ್ನು ಒಳಗೊಂಡಿರಬೇಕು.
9. ದರಪಟ್ಟಿಯ **ಅನುಬಂಧ(01)** ರಲ್ಲಿ ನಮೂದಿಸಿದ ಎಲ್ಲಾ ಟ್ರೋಫಿ ಹಾಗೂ ಮೆಡಲ್ಸ್‌ಗಳಿಗೆ ಕಡ್ಡಾಯವಾಗಿ ದರಗಳನ್ನು ನಮೂದಿಸಬೇಕು.
10. ಅಗತ್ಯವಿದ್ದಲ್ಲಿ ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಯ ಸರಾಸರಿ ಮೊತ್ತವನ್ನು ಪರಿಗಣಿಸಲಾಗುವುದು.
11. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸುವುದಿಲ್ಲ.
12. ದರಪಟ್ಟಿಗಳನ್ನು ಯಾವುದೇ ಹಂತದಲ್ಲಿ ಕಾರಣ ನೀಡದೇ ಅಂಗೀಕರಿಸುವ ಅಥವಾ ಖರೀದಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
13. ವಿಶ್ವವಿದ್ಯಾನಿಲಯವು ಒಂದು ವೇಳೆ ತಮ್ಮ ದರಪಟ್ಟಿಯನ್ನು ತಾತ್ಕಾಲಿಕವಾಗಿ ಅಂಗೀಕರಿಸಿದ್ದಲ್ಲಿ ಮಾದರಿ **ಟ್ರೋಫಿ ಹಾಗೂ ಮೆಡಲ್ಸ್‌ಗಳನ್ನು** ಪ್ರಚುರಪಡಿಸತಕ್ಕದ್ದು ಮತ್ತು ಮಾದರಿಗಳು ಅನುಮೋದನೆಯಾದ ನಂತರ ಸರಬರಾಜು ಆದೇಶ ನೀಡಲಾಗುವುದು.
14. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕ ದಿಂದ 90 ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.
15. ಟ್ರೋಫಿ ಹಾಗೂ ಮೆಡಲ್ಸ್‌ಗಳನ್ನು ಸರಬರಾಜು ಮಾಡಿ ಬಿಲ್ಲನ್ನು ಸಮುಚ್ಚಿತ ಮಾರ್ಗದಲ್ಲಿ ಪೂರಕ ದಾಖಲೆಗಳೊಂದಿಗೆ ಸಲ್ಲಿಸಿದ 30 ದಿನಗಳೊಳಗೆ ಬಿಲ್ಲನ್ನು ಪಾವತಿಸಲಾಗುವುದು.
16. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 26.08.2019 ಸಂಜೆ 5–30.
17. ದರಪಟ್ಟಿಯನ್ನು ದಿನಾಂಕ:27.08.2019 ರಂದು ಮದ್ಯಾಹ್ನ 12–30ಕ್ಕೆ ತೆರೆಯಲಾಗುವುದು. ದರಪಟ್ಟಿಗಳನ್ನು ಕುಲಸಚಿವರು, **ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು–572 103** ಇವರಿಗೆ ಮುದ್ದಾಂ **ಅಥವಾ ಅಂಚೆಯ ಮೂಲಕ** ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ.
18. ಹೆಚ್ಚಿನ ವಿವರಗಳು ಮತ್ತು ಪ್ರಶ್ನೆಗಳ ಅಥವಾ ಅಗತ್ಯ ಸ್ಪಷ್ಟಿಕರಣವಿದ್ದಲ್ಲಿ **ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಬಹುದು.
19. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ಕುಲಸಚಿವರು

**ಕುಲಸಚಿವರು**
**ತುಮಕೂರು ವಿಶ್ವವಿದ್ಯಾನಿಲಯ**

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ರಕ್ಷಣಾ ಪ್ರತಿ.

ಅನುಬಂಧ–01

| Sl. No | Particulars | Specifications | Quantity |
|---|---|---|---|
| 01 | 1st Place – Winner Trophy | Quality- Metal<br>Size- 18 inches, 03 inches base<br>On Trophies –TUMKUR UNIVERSITY INTER COLLEGIATE SPORTS AND GAMES 2019-2020 Should be Printed | 29 |
| 02 | 2nd Place– Runner-Up Trophy | Quality- Metal<br>Size- 15inches, 03 inches base<br>On Trophies –TUMKUR UNIVERSITY INTER COLLEGIATE SPORTS AND GAMES 2019-2020 Should be Printed | 28 |
| 03 | 1st Place – Medals | Quality- Metal<br>Type – Gold Colour Round Medal<br>Size- 2 ½ inches<br>On Medals –TUMKUR UNIVERSITY INTER COLLEGIATE SPORTS AND GAMES 2019-2020 Should be Printed | 306 |
| 04 | 2nd Place– Medals | Quality- Metal<br>Type - Silver Colour Round Medal<br>Size- 2 ½ inches<br>On Medals –TUMKUR UNIVERSITY INTER COLLEGIATE SPORTS AND GAMES 2019-2020 Should be Printed | 306 |
| 05 | 3rd Place– Medals | Quality- Metal<br>Type - Bronze Colour Round Medal<br>Size- 2 ½ inches<br>On Medals –TUMKUR UNIVERSITY INTER COLLEGIATE SPORTS AND GAMES 2019-2020 Should be Printed | 98 |
| 06 | Athletics Overall Championship for Men & Women Trophy | Quality- Metal<br>Size- 21 inches, 03 inches base<br>On Trophies –TUMKUR UNIVERSITY INTER COLLEGIATE Athletic Meet 2019-2020 (Men-01, Women-01) Should be Printed | 02 |

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು